**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ**

**ಸಿಸಿ ಸಂಃ 1175/2019**

| | | |
|---|---|---|
| ಸಾಕ್ಷಿಯ ಹೆಸರುಃ | ದುರ್ಗೇಶ | ಫ್ರಾಸಾಃಃ 5 |
| ತಂದೆಯ ಹೆಸರುಃ | ಸಣ್ಣಪ್ಪ | ಚಾಸಾಃಃ 7 |
| ವಯಸ್ಸುಃ | 40 ವರ್ಷ | ಪ್ರಮಾಣೀಕರಿಸಿದ ದಿಃ 09.08.2023. |
| ಉದ್ಯೋಗಃ | ಎಳೇನೀರು ವ್ಯಾಪಾರ | |
| ವಾಸಸ್ಥಳಃ | ಅಬ್ಬೂರು ರಸ್ತೆ , ಪಿರಿಯಾಪಟ್ಟಣ ತಾಲ್ಲೂಕು. | |

**ಮುಖ್ಯ ವಿಚಾರಣೆಃ** ಸಸಅ **ರಿಂದಃ**

ಸಾಕ್ಷಿಯು ಮಹಜರ್‌ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.01** ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು **ನಿ.ಪಿ.01(ಡಿ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 3 ವರ್ಷದ ಹಿಂದೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೊಲೀಸರು ಮಹಜರ್ ಕುರಿತು ನನ್ನನ್ನು ಎಲ್ಲಿಯೂ ಕರೆಸಿಲ್ಲ, ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. **ನಿ.ಪಿ.01** ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ.

**ಪಾಟೀ ಸವಾಲುಃ** ಸಸಅ ರವರಿಂದಃ

1. ದಿ.21.02.2019 ರಂದು ಪೊಲೀಸ್ ರು ಮಾಲಂಗಿ ಗ್ರಾಮದ ಚಾಸಾ-1 ರವರ ಜಮೀನಿನ ಬಳಿ ಬಂದಾಗ ಈ ಕೇಸಿನ ವಿಧ್ಯಮಾನಗಳನ್ನು ತಿಳಿಸಿ ನನ್ನನ್ನು ಬರಮಾಡಿಕೊಂಡು ಪಂಚರಾಗಲು ಕೊರಿಕೊಂಡರು ಎಂದರೆ ಸರಿಯಲ್ಲ. ಅದಕ್ಕೆ ನಾನು ಒಪ್ಪಿದ ಮೇರೆಗೆ ಸ್ಥಳದಲ್ಲಿದ್ದ ಚಾಸಾ-3 ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಮಧ್ಯಾಹ್ನ 2.00 ರಿಂದ 03.00 ಗಂಟೆಯವರೆಗೆ ಈಗ ಓದಿ ಕೇಳಿಸಿಕೊಂಡ ನಿ.ಪಿ.1 ರಂತೆ ಮಹಜರ್ ಕ್ರಮ ಜರುಗಿಸಿ ಆರೋಪಿಯು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು

ಮುಂದಿನ ಕ್ರಮಕ್ಕಾಗಿ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ ಮತ್ತು ಸ್ಥಳದಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ

ಇಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಿ.ನ್ಯಾ. ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ.

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ**

**ಸಿಸಿ ಸಂಃ 1175/2019**

| | | |
|---|---|---|
| ಸಾಕ್ಷಿಯ ಹೆಸರುಃ | ಮಹೇಶ | ಫ್ರಾಸಾಃಃ 4 |
| ತಂದೆಯ ಹೆಸರುಃ | ನಾಗಣ್ಣಚಾರಿ | ಚಾಸಾಃಃ 10 |
| ವಯಸ್ಸುಃ | 52 ವರ್ಷ | ಪ್ರಮಾಣೀಕರಿಸಿದ ದಿಃ 09.08.2023. |
| ಉದ್ಯೋಗಃ | ಮುಖ್ಯ ಪೇದೆ, ಬೆಟ್ಟದಪುರ ಪೊಲೀಸ್ ಠಾಣೆ | |
| ವಾಸಸ್ಥಳಃ | ಬೆಟ್ಟದಪುರ | |

**ಮುಖ್ಯ ವಿಚಾರಣೆಃ ಸಸಅ ರಿಂದಃ**

ನಾನು 2013 ರಿಂದ 2023 ರವರೆಗೆ ಪಿರಿಯಾಪಟ್ಟಣ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 20/02/2019 ರಂದು ಠಾಣಾ ಉಸ್ತುವಾರಿಯಲ್ಲಿದ್ದಾಗ ಅಸ್ಪತ್ರೆಯಿಂದ ಮೇಮೊ ಬಂದ ಮೇರೆಗೆ ಅಸ್ಪತ್ರೆಗೆ ಭೇಟಿ ನೀಡಿ ಚಾಸಾ-1 ರವರ ಲಿಖಿತ ಹೇಳಿಕೆಯನ್ನು ಪಡೆದುಕೊಂಡು ಠಾಣೆಗೆ ಹಿಂದಿರುಗಿ ಠಾಣಾ ಮೊಕದ್ದಮೆ ಸಂ.48/2018 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ದಿ. 21.02.2019 ರಂದು ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ-3 ರವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪಂಚಾಯ್ತಿದಾರರಾದ ಚಾಸಾ-6 ಮತ್ತು 7 ರವರ ಸಮಕ್ಷಮ ಮಧ್ಯಾಹ್ನ 02.00 ರಿಂದ 03.00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ, ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಯನ್ನು ಅಮಾನತ್ತುಪಡಿಸಿಕೊಂಡು ಠಾಣಾ ಮಾಲುಪಟ್ಟಿ ಸಂ.36/2019 ರಂತೆ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ನಂತರ ಈ ಕೇಸಿನ ಕಡತವನ್ನು ಚಾಸಾ-11 ರವರಿಗೆ ಮುಂದಿನ ತನಿಖೆಗಾಗಿ ವರ್ಗಾಯಿಸಿರುತ್ತೇನೆ.

ಸಾಕ್ಷಿಯು ಪ್ರಥಮ ಮಾಹಿತಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.5** ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ.5(ಎ)** ಎಂದು ಗುರುತಿಸಲಾಗಿದೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು **ನಿಪಿ.6** ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು **ನಿಪಿ.6(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಮಹಜರ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ **ನಿ.ಪಿ.1** ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು, ಅದನ್ನು **ಮುದ್ದೆಮಾಲು-1** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ **ಪರ ವಕೀಲರಿಂದಃ**

1. ನಾನು ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.
2. ನಾನು ನಿ.ಪಿ.1 ನ್ನು ಠಾಣೆಯಲ್ಲಿ ಕುಳಿತು ಸೃಷ್ಟಿಮಾಡಿರುತ್ತೇನೆ ಎಂದರೆ ಸರಿಯಲ್ಲ.
3. ಮು.ಮಾ-1 ನ್ನು ಈ ಪ್ರಕರಣಕ್ಕೋಸ್ಕರ ನೀವೆ ಸೃಷ್ಟಿಮಾಡಿದ್ದಿರಿ ಎಂದರೆ ಸರಿಯಲ್ಲ.
4. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ, ಚಾಸಾ-1 ರವರ ಮಾತನ್ನು ಕೇಳಿ ಸುಳ್ಳು ಪ್ರ.ವ.ವರದಿಯನ್ನು ದಾಖಲು ಮಾಡಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

ಸಿ.ನ್ಯಾ ಹಾಗೂ ಪ್ರ.ವ.ನ್ಯಾದಂ.
ಪಿರಿಯಾಪಟ್ಟಣ.